**O.S. 115-15 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 27.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ M V S, ವಕೀಲರಿಂದಃ**

20. ನಾನೇ ಈ ಕೇಸಿಗೆ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿ ಎರಡು ಎಕರೆ ಇದೆ. ದಾವಾ ಆಸ್ತಿ ಗೋಕುಲ ರೋಡಿನ ಕುಷ್ಟ ರೋಗ ಬಳಿ ಇದೆ. ಸದರಿ ಆಸ್ತಿ ಬಳಿ ಸರಕಾರಿ ಆಸ್ಪತ್ರೆ ಇದೆ ಅಂದರೆ ಸರಿ. ಈ ಕಟ್ಟಡ ಕಟ್ಟುತ್ತಿದ್ದಾರೆ. ಒಂದು ಎಕರೆಗೆ 2 – 3 ಕೋಟಿ ಬೆಲೆ ಇದೆ. ಪ್ರತಿವಾದಿ 1 ಹಾಗೂ 2 ರವರು ಶಾಲೆ ಕಲಿತಿರುವುದಿಲ್ಲ. ಒಂದನೇ ಪ್ರತಿವಾದಿ 1 ಲಕ್ಷ ರೂ, ಹಣವನ್ನು ಮೂರನೇ ಪ್ರತಿವಾದಿ ಬಳಿ ಕೇಳಿದ್ದರು ಅಂದರೆ ಗೊತ್ತಿಲ್ಲ. ಪ್ರತಿವಾದಿ 1 ಹಾಗೂ 2 ರವರು ಮೂರನೇ ಪ್ರತಿವಾದಿ ಮೇಲಿರುವ ನಂಬಿಕೆಯಿಂದ ಕೆಲವು ದಾಖಲೆಗಳ ಮೇಲೆ ಸಹಿ ಮಾಡಿಕೊಟ್ಟಿದ್ದರು ಅಂದರೆ ಸರಿ. ಮೂರನೇ ಪ್ರತಿವಾದಿ ಅದನ್ನು ದುರುಪಯೋಡಿಸಿಕೊಂಡಿದ್ದಾರೆ ಅಂದರೆ ಸರಿ. ಮೂರನೇ ಪ್ರತಿವಾದಿ ಮಾಡಿದ ಕೇಸ ವಜಾ ಆಯಿತು ಅಂದರೆ ಸರಿ. ಎರಡನೇ ಪ್ರತಿವಾದಿಗೆ ಗಜಾನನ ಅಣ್ವೇಕರ ರವರ ಪರಿಚಯ ವಿತ್ತು ಅಂದರೆ ಸರಿ. ಗಜಾನನ ಅಣ್ವೇಕರ ರವರು ನಿಮ್ಮ ಕೇಸ ಮುಗಿಸುತ್ತೇನೆಂದು ಹೇಳಿ ಕೆಲವಂದಿಷ್ಟು ಹಣ ಕೊಟ್ಟು ಪ್ರತಿವಾದಿ 1 ಹಾಗೂ 2 ರವರನ್ನು ಉಪ-ನೋಂದಣಾಧಿಕಾರಿ ಕಚೇರಿಗೆ ಕರೆದುಕೊಂಡು ಹೋಗಿ ಸಹಿ ಮಾಡಿರುತ್ತಾರೆ ಅಂದರೆ ಸರಿ. ಪ್ರತಿವಾದಿ 1 ಹಾಗೂ 2 ರವರಿಗೆ ಆಸ್ತಿ ಮಾರಾಟ ಮಾಡುವ ಉದ್ದೇಶ ಇರಲಿಲ್ಲ ಅಂದರೆ ಸರಿ. ಬ್ಯಾಂಕಿನ ಸಾಲ ತುಂಬಲು ಹಣದ ಅವಶ್ಯಕತೆ ಇತ್ತು ಅಂದರೆ ಗೊತ್ತಿಲ್ಲ. ಯಾವಾಗಲೂ ಅವರು ಕುಡಿಯುತ್ತಿರಲಿಲ್ಲ. ನನ್ನ ತಾಯಿಗೆ ಆರಾಮ ಇರಲಿಲ್ಲ, ಈಗ ನಮ್ಮ ತಂದೆ ಕುಡಿದು ಮನೆಯಲ್ಲಿ ಮಲಗಿಕೊಂಡಿದ್ದನು ಎಂದು ಹೇಳುತ್ತಿದ್ದಾಳೆ. ಅಣ್ವೇಕರ ಮೋಸ ಮಾಡಿದ ವಿಷಯ ಮೊದಲು ಕೇಸ್ ಮಾಡಿದಾಗ ಗೊತ್ತಾಯಿತು. ಈ ಕೇಸಿನ ಮೂಲ ಸೂತ್ರಧಾರ ಗಜಾನನ ಅಣ್ವೇಕರ ಅಂದರೆ ಸರಿ. ಅವರು ಗೋಕುಲ ರೋಡಿನಲ್ಲಿರುತ್ತಾರೆ. 1 ಹಾಗೂ 2 ನೇ ಪ್ರತಿವಾದಿಗಳು ಗಜಾನನ ಅಣ್ವೇಕರ ರವರಿಗೆ ಬಹಳ ನಂಬಿದ್ದರಿಂದ ಅವರು ಮೋಸ ಮಾಡಿದರು ಅಂದರೆ ಸರಿ. ಗಜಾನನ ಅಣ್ವೇಕರ ರವರ ಮೇಲೆ ಕೇಸ ಮಾಡಲು ಬರುತ್ತದೆ ಅಂದರೆ ಮಾಡುತ್ತೇನೆ. ಗಜಾನನ ಅಣ್ವೇಕರ ರವರು ಕೋರ್ಟಗೆ ಬಂದರೆ ಎಲ್ಲಾ ಗೊತ್ತಾಗುತ್ತದೆ ಅಂದರೆ ಸರಿ. ಪ್ರತಿವಾದಿ 1 ಹಾಗೂ 2 ರವರ ಚೆಕ್ ಬುಕ್, ಪಾಸ್ ಪುಸ್ತಕ ಹಾಗೂ ಬಾಂಡಗಳನ್ನು ಗಜಾನನ ಅಣ್ವೇಕರ ರವರು ತೆಗೆದುಕೊಂಡು ಹೋಗಿರುತ್ತಾನೆ ಅಂದರೆ ಸರಿ.

**O.S. 115-15** **PW : 1**

**ಮುಂದುವರೆದ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.